# ಡಾಗ್ ವಾಕ್



ಈ ಚಿತ್ರದಲ್ಲಿರುವ ನಾಯಿಯನ್ನೊಮ್ಮೆ ನೋಡಿ. ಕೈಯಲ್ಲಿ ಹ್ಯಾಂಡ್‌ಬ್ಯಾಗ್ ಸಿಕ್ಕಿಸಿಕೊಂಡು ಅದೆಷ್ಟು ವೈಯಾರದಿಂದ ವಾಕಿಂಗ್ ಹೊರಟಿದೆ!

‘ಲೂಲೂ’ ಎಂಬ ಹೆಸರಿನ ಪಿಂಶ್ಚರ್ ತಳಿಯ, ಒಂದು ವರ್ಷದ ಈ ಪುಟ್ಟ ಹೆಣ್ಣು ನಾಯಿ ಮನುಷ್ಯರ ರೀತಿಯಲ್ಲೇ ನಡೆಯುತ್ತದೆ.

ಹೀಗೆ ಬಿಂಕದ ಸಿಂಗಾರಿ ತರಹ ನಡೆಯುವ ಇದರ ನಡಿಗೆಗೆ ಚೀನಾ ದೇಶದ ಹೆನನ್ ಪ್ರಾವಿನ್ಸ್ ಬಳಿಯಲ್ಲಿರುವ ಜುಮೇಡಿಯನ್ ಪಟ್ಟಣದ ಜನರೆಲ್ಲ ಮಾರುಹೋಗಿದ್ದಾರೆ. ನಿವೃತ್ತ ಟೀಚರ್ ಆಗಿರುವ ಈ ಶ್ವಾನದ ಒಡೆಯ ಜೌ ಗ್ವಾನ್ ಶನ್‌ಗಂತೂ ಈ ಮುದ್ದು ಮರಿಯನ್ನು ಬಿಟ್ಟಿರಲು ಸಾಧ್ಯವೇ ಇಲ್ಲವಂತೆ. ತಾನು ಹೋಗುವಲ್ಲೆಲ್ಲ ಇದನ್ನು ಕರೆದುಕೊಂಡು ಹೋಗುತ್ತಾನೆ. ‘ಲೂಲೂ ಹೀಗೇಕೆ ನಡೆಯುತ್ತಾಳೆಂಬ ರಹಸ್ಯ ನನಗೂ ತಿಳಿದಿಲ್ಲ. ಇವಳ ನಡಿಗೆಯಿಂದ ಎಲ್ಲರನ್ನೂ ಮೋಡಿ ಮಾಡುತ್ತಾಳೆಂದು ಹೆಮ್ಮೆಯಿಂದ ಹೇಳುತ್ತಾನೆ’.

ಒಟ್ಟಿನಲ್ಲಿ ಹಾಲಿವುಡ್ ಬೆಡಗಿಯರ ಶೈಲಿಯಲ್ಲೇ ಈ ನಾಯಿ ಮಾಡುವ ಕ್ಯಾಟ್ ವಾಕ್ ಅಲ್ಲ ಡಾಗ್ ವಾಕ್ ಅಚ್ಚರಿ ಮೂಡಿಸುತ್ತದೆ.

■ ವಿದ್ಯಾ ವಿ ಹಾಲಭಾವಿ

